ಆರ್ ಡಬ್ಲುಃ 1

ದಿನಾಂಕಃ 14-01-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್ ಜಿ ಎನ್ ವಕೀಲರಿಂದಃ

ನಮ್ಮ ಗ್ರಾಮಕ್ಕೆ ಹೆಗಡೆಯಿಂದ ಹೋಗಲು ಕಲಕೋಡ ರಸ್ತೆಯಿಂದ ಹೋಗುತ್ತೇನೆ. ಕಲಕೋಡ ಗ್ರಾಮದಲ್ಲಿ ಸುಮಾರು 89 ಕುಟುಂಬಗಳು ವಾಸ್ತವ್ಯ ಇರುತ್ತವೆ. ಹೆಗಡೆಯಿಂದ ನಮ್ಮ ಊರಿಗೆ ಸದರಿ ರಸ್ತೆ ಎಷ್ಟು ದೂರ ಇರುತ್ತದೆ ಎಂದು ನನಗೆ ಅಂದಾಜು ಇಲ್ಲಾ. ವಾದಿಯು ಕಲಕೋಡ ಮಜರೆಯಲ್ಲಿ ಜಾಗ ಖರೀದಿಸಿದ್ದಾನೆ. ಅವನು ಎಷ್ಟನೇ ಇಸ್ವಿಯಲ್ಲಿ ಹಾಗೂ ಎಷ್ಟು ಜಾಗ ಖರೀದಿಸಿದ್ದಾನೆ ಎಂದು ನನಗೆ ಗೊತ್ತಿಲ್ಲಾ. ವಾದಿಯು ಸುಮಾರು 15 ವರ್ಷಗಳಿಂದ ಆ ಸ್ಥಳದಲ್ಲಿ ಇದ್ದಾರೆ ಆದರೆ ಅವರು ಎಷ್ಟು ವರ್ಷಗಳ ಹಿಂದೆ ಮನೆ ಕಟ್ಟಿದ್ದಾರೆಂದು ನನಗೆ ಗೊತ್ತಿಲ್ಲಾ. ಪಂಚಾಯತದವರು ಅಲ್ಲಿ ರಸ್ತೆಯನ್ನು ಎಷ್ಟನೇ ಇಸ್ವಿಯಲ್ಲಿ ಮಾಡಿದ್ದಾರೆ ಎಂದರೆ ಅಲ್ಲಿ ನಾನು ಜನಿಸುವ ಪೂರ್ವದಿಂದಲೂ ರಸ್ತೆ ಇರುತ್ತದೆ. ನನಗೆ ಈಗ 36 ವರ್ಷ ವಯಸ್ಸಾಗಿದೆ. ನನಗೆ ಬುದ್ದಿ ಬಂದಾಗಿನಿಂದ ಆ ರಸ್ತೆ ಡಾಂಬರ ರಸ್ತೆ ಆಗಿದೆ. ಅದು ಸುಮಾರು ಎಷ್ಟನೇ ಸಾಲಿನಲ್ಲಿ ಕಟ್ಟಲಾಗಿದೆ ಎಂದು ನನಗೆ ಗೊತ್ತಿಲ್ಲಾ. ಆ ರಸ್ತೆ ಮೊದಲಿನಿಂದಲೂ ಇಲ್ಲಿಯವರೆಗೆ ಒಂದೇ ಅಳತೆಯಲ್ಲಿ ಇದೆಯಾ ಅಥವಾ ಅದರ ಅಳತೆ ಹೆಚ್ಚು ಕಡಿಮೆಯಾಗಿದೆಯಾ ಎಂದು ಹೇಳಲು ನನಗೆ ಗೊತ್ತಿಲ್ಲಾ. ವಾದಿಯು ಕಟ್ಟಿದ ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿರುವುದು ನನಗೆ ಗೊತ್ತಿಲ್ಲಾ. ಅವರ ಮನೆ ರಸ್ತೆಗೆ ಹತ್ತಿರದಲ್ಲಿ ಇದೆ ಅದು ಎಷ್ಟು ಹತ್ತಿರದಲ್ಲಿದೆ ಎಂದು ಅಳತೆ ಹೇಳಲು ನನಗೆ ಗೊತ್ತಿಲ್ಲಾ.

2. 2017 ರಲ್ಲಿ ವಾದಿಯು ನನ್ನ ಹಾಗೂ ಇತರರ ವಿರುದ್ಧ ಒಂದು ದಾವೆ ದಾಖಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನಾನು ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿದ್ದೆ ಎಂದರೆ ಸರಿ. ಕಲಕೋಡ ರಸ್ತೆಯ ಬದಿಗೆ ವಾದಿಯ ಮನೆ ಇರುವಂತೆ ಇತರರ ಮನೆಗಳು ಸಹ ಇರುತ್ತವೆ ಎಂದರೆ ಸರಿ. ವಾದಿಯ ಮನೆಯ ಹತ್ತಿರ ಒಂದು ಮನೆ ಇರುತ್ತದೆ. ಅದು ಬೀರಪ್ಪ ಪಟಗಾರ ಇವರಿಗೆ ಸೇರಿದ್ದಾಗಿರುತ್ತದೆ. ಶಂಕರ ಪಟಗಾರ ಇವರ ಮನೆ ಇರುವುದು ನನಗೆ ಗೊತ್ತಿದೆಯಾ ಎಂದರೆ ಅವರ ಮನೆ ಆ ರಸ್ತೆಯ ಪಕ್ಕದಲ್ಲಿ ಇಲ್ಲಾ. ಗಂಗೆ ಬೈರು ಗೌಡ ಇವರ ಮನೆ ಸಹ ಆ ರಸ್ತೆಯಲ್ಲಿ ಇಲ್ಲಾ. ನನ್ನ ಪ್ರಕಾರ ಈಗ ಇರುವ ರಸ್ತೆ ಎಷ್ಟು ಅಗಲ ಇದೆ ಎಂದು ಅಂದಾಜು ಹೇಳಲು ನನಗೆ ಗೊತ್ತಾಗುವುದಿಲ್ಲಾ. ನಮ್ಮ ರಸ್ತೆಯಲ್ಲಿ ಮಳೆಗಾಲದಲ್ಲಿ ನೀರು ಹರಿದು ಹೋಗಲು ಸುಮಾರು ಎಷ್ಟು ಸಣ್ಣ ಸೇತುವೆಗಳು ಇವೆ ಎಂದು ನನಗೆ ಗೊತ್ತಿಲ್ಲಾ. ವಾದಿಯ ಮನೆಯ ಹತ್ತಿರ ಮಳೆಗಾಲದಲ್ಲಿ ನೀರು ಹರಿದುಹೋಗಲು ಇರುವ ಮೋರಿ ಇದೆಯಾ ಎಂ ದು ನೋಡಿಲ್ಲಾ. ಸಾಕ್ಷಿಯು ಮುಂದುವರೆದು ಸದರಿ ರಸ್ತೆಯ ಎರಡೂ ಬದಿಯಲ್ಲಿ ಲಗ್ತ ಜಾಗದವರು ಮಣ್ಣು ಏರಿಸಿರುವುದಾಗಿ ನುಡಿದಿರುತ್ತಾರೆ. ಮಳೆಗಾಲದಲ್ಲಿ ನೀರು ಹರಿದು ಹೋಗಲು ರಸ್ತೆಯ ಲಗ್ತ ಜಾಗದವರು ಏನೂ ವ್ಯವಸ್ಥೆ ಮಾಡಿಲ್ಲಾ. ನಮ್ಮ ಊರಿನಿಂದ ಬರುವಾಗ ದಕ್ಷಿಣಕ್ಕೆ ಗುಡ್ಡ ಇರುತ್ತದೆ. ಅದು ಎಷ್ಟು ಎತ್ತರದ ಗುಡ್ಡ ಎಂದು ನನಗೆ ಅಂದಾಜು ಹೇಳಲು ಗೊತ್ತಿಲ್ಲಾ. ಅದು ಎಷ್ಟು ಉದ್ದ ಇದೆ ಎಂದು

ಹೇಳಲು ನನಗೆ ಬರುವುದಿಲ್ಲಾ. ಕಲಕೋಡ ರಸ್ತೆ ಯಾವ ಯಾವ ಸರ್ವೆ ನಂಬರಗಳಲ್ಲಿ ಹಾದು ಹೋಗಿದೆ ಎಂದು ನನಗೆ ಗೊತ್ತಿಲ್ಲಾ. ವಾದಿಯು ಜಾಗ ಖರೀದಿ ಮಾಡುವ ಪೂರ್ವದಲ್ಲಿ ಆ ಜಾಗ ಒಬ್ಬ ಭಟ್ಟರಿಗೆ ಸೇರಿತ್ತು ಅವರ ಹೆಸರು ನನಗೆ ಗೊತ್ತಿಲ್ಲಾ. ಅವರ ಹೆಸರು ಏನು ಎಂದು ನಾನು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿಲ್ಲಾ ಆದರೆ ನಮ್ಮ ಹಿರಿಯರು ಕೊಟ್ಟಿರಬಹುದು. ಹಾಗಾಗೀ ಈ ಪ್ರಕರಣದಲ್ಲಿ ನಮ್ಮ ವಕೀಲರಿಗೆ ಯಾರು ಯಾರು ಮಾಹಿತಿ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲಾ ಎಂದರೆ ಈ ಪ್ರಕರಣದಲ್ಲಿ ಒಟ್ಟು 40 ಜನರಿರುವುದರಿಂದ ಗೊತ್ತಿಲ್ಲಾ. ಯಾರು ಮಾಹಿತಿ ಕೊಟ್ಟಿದ್ದಾರೆಂದು ನನಗೆ ಹೇಳಿಲ್ಲಾ. ಈ ದಾವೆಗೆ ಸಂಬಂಧಿಸಿದಂತೆ ನಾನು ಕಾಗದಪತ್ರಗಳನ್ನು ಹಾಜರಪಡಿದ್ದೇನೆ. ಯಾವ ಯಾವ ಕಾಗದ ಪತ್ರಗಳು ಎಂದು ನನಗೆ ನೆನಪಿಲ್ಲಾ. ಅವುಗಳನ್ನು ನಮ್ಮ ಕಡೆಯ ಪಕ್ಷಗಾರರು ಸೇರಿ ಪಡೆದುಕೊಂಡಿದ್ದು ನಮ್ಮ ವಕೀಲರಿಗೆ ನಾನೇ ತಂದು ಕೊಟ್ಟಿದ್ದೇನೆ.

ಮುಂದುವರೆದ ಪಾಟೀ ಸವಾಲಿಗೆ ಶ್ರೀ ಆರ್ ಜಿ ಎನ್ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಕುಮಟಾ.